## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 246/2025**

**ಸಾಕ್ಷಿಃ ಸಿಡಬ್ಲ್ಯೂಃ 6 , ಪಿ.ಡಬ್ಲ್ಯೂಃ 4**

ಸಾಕ್ಷಿದಾರನ ಹೆಸರು : ವಿಶ್ವನಾಥ ವಿ ಭಟ್ಟ

ತಂದೆಯ ಹೆಸರು : ವಿರುಪಾಕ್ಷ ಶಂಭು ಭಟ್ಟ

ವಯಸ್ಸು : 46 ವರ್ಷ

ಉದ್ಯೋಗ : ಅಬಕಾರಿ ನಿರೀಕ್ಷಕರು, ಸೊರಬ ವಲಯ.

ವಾಸ್ತವ್ಯ : ಶಿವಮೊಗ್ಗ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 12/12/2025**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 24.05.2021 ರವರೆಗೆ ನಾನು ಭಟ್ಕಳ ವಲಯ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 12.06.2024 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ 1 ರಿಂದ ಪಡೆದಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ನಾನು ತನಿಖಾಧಿಕಾರಿಯಾಗಿದ್ದು ನಾನು ದಿಃ 06.07.2024 ರಂದು ಜಪ್ತಾದ ಮುದ್ದೆ ಮಾಲು 7.74 ಐ ಎಮ್ ಎಲ್ ಅನ್ನು ಮುಟ್ಟುಗೋಲಿಗೆ ಉಪ ಅಬಕಾರಿ ಆಯುಕ್ತಕರಿಗೆ ಪತ್ರ ಬರೆದಿರುತ್ತೇನೆ. ಮುದ್ದೆಮಾಲು ಮುಟ್ಟುಗೊಲು ಆದೇಶ ದಿಃ 07.08.2024 ರಂದು ಆಗಿದ್ದು ಅದನ್ನು ಕಡತಕ್ಕೆ ಲಗತ್ತಿಸಿರುತ್ತೇನೆ. ದಿಃ 24.07.2024 ರಂದು ಜಪ್ತಾದ ದ್ವಿಚಕ್ರ ವಾಹನ ನಂ .ಕೆಎ 47 ಯು 2019 ರ ಮುಟ್ಟುಗೊಲಿಗೆ ಪತ್ರ ಬರೆದಿದ್ದು ದಿಃ 07.08.2024 ರಂದು ಮುಟ್ಟುಗೊಲು ಆದೇಶವಾಗಿದ್ದು ಅದರ ಪ್ರತಿ ಕಡತಕ್ಕೆ ಲಗತ್ತಿಸಿರುತ್ತೇನೆ. ದಿ 24.07.2024 ರಂದು ಚಾಸ 2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 29.07.2024 ರಂದು ಸದರಿ ಪ್ರಕರಣದ ಆರೋಪಿಗೆ ನೊಟೀಸು ನೀಡಿದ್ದು ಇರುತ್ತದೆ. ಜಪ್ತಾದ ದ್ವಿಚಕ್ರ ವಾಹನದ ಬಿ ಎಕ್ಸ್ಟ್ರೇಕ್ಟ ಪ್ರತಿಯಂತೆ ವಾಹನದ ಮಾಲೀಕರಿಗೆ ನೊಟೀಸನ್ನು ನೀಡಿದ್ದು ಅವರು ಕಚೇರಿಗೆ ದಿಃ 02.08.2024 ರಂದು ಹಾಜರಾಗಿದ್ದು ಇರುತ್ತದೆ. ದಿ 20.09.2024 ರಂದು ಪ್ರಕರಣದ ಆರೋಪಿಗೆ ಹಾಗೂ ವಾಹನ ಮಾಲೀಕರಿಗೆ ನೊಟೀಸನ್ನು ನೀಡಿ ದಿಃ 21.09.2024 ರಂದು ಅವರು ಕಚೇರಿಗೆ ಹಾಜರಾಗಿ ಜಪ್ತಾದ ವಾಹನದ ಮಾಲೀಕರು ದಿಃ 04.12.2021 ರಂದು ಸದರಿ ವಾಹನವನ್ನು ಆರೋಪಿಗೆ ಮಾರಾಟ ಮಾಡಿದ್ದು ಸದರಿ ವಾಹನ ವಿನಾಯಕ ಕೋ ಅಪರೇಟಿವ್ ಬ್ಯಾಂಕ್ ನಲ್ಲಿ ಅಡವು ಇಟ್ಟಿದ್ದು ಸಾಲ ತೀರುವವರೆಗೆ ವಾಹನ ವರ್ಗಾವಣೆ ಮಾಡುವುದಾಗಿ ಕರಾರು ಮಾಡಿಕೊಂಡ ಬಗ್ಗೆ ಹೇಳಿಕೆ ನೀಡಿರುತ್ತಾರೆ. ದಿಃ 21.09.2024 ರಂದು ಆರೋಪಿತನು ತಮ್ಮ ಸ್ವಖುಶಿ ಹೇಳಿಕೆ ದಾಖಲಿಸಿ ದಿಃ 04.12.2021 ರಂದು ಸದರಿ ವಾಹನದ ಸಂಪೂರ್ಣ ಹಣ ಪಾವತಿ ಮಾಡಿ ಖರೀದಿ ಮಾಡಿದ್ದು ಸದರಿ ಪ್ರಕರಣಕ್ಕೂ ವಾಹನ ಮಾಲೀಕರಿಗೂ ಯಾವುದೇ ಸಂಬಂದ ಇಲ್ಲಾ ಎಂದು ತಾನು ಕೃತ್ಯದಲ್ಲಿ ಭಾಗಿ ಆದ

ಬಗ್ಗೆ ಸ್ವಕುಶಿ ಹೇಳಿಕೆ ನೀಡಿರುತ್ತಾರೆ. ಚಾಸ 2 ರವರಿಂದ 65 ಬಿ ಪ್ರಮಾಣಪತ್ರ ಪಡೆದಿರುತ್ತೇನೆ. ಪ್ರಕರಣದ ತನಿಖೆ ಮುಕ್ತಾಯ ಮಾಡಿ ಆರೋಪಿ ಈ ಹಿಂದೆ ಅಬಕಾರಿ ಪ್ರಕರಣದಲ್ಲಿದ್ದು ಅವರ ಮೇಲಿನ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ಅಂತಿಮ ವರದಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

2. ಸಾಕ್ಷಿಯು ಮುದ್ದೆಮಾಲು ಮುಟ್ಟುಗೋಲಿಗೆ ಅನುಮತಿ ಕೋರಿ ಬರೆದ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ– 10 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 10 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲು ಮುಟ್ಟುಗೊಲಿನ ಆದೇಶ ನೋಡಿ ಗುರುತಿಸಿದ್ದು ಅದನ್ನು ನಿಪಿ– 11 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 11 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದ್ವಿಚಕ್ರ ಮುಟ್ಟುಗೋಲಿಗೆ ಡಿಸಿ ಅವರು ಮಾಡಿದ ಆದೇಶ ನೋಡಿ ಗುರುತಿಸಿದ್ದು ಅದನ್ನು ನಿಪಿ– 12 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 12 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ ಐ ಎನ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ನಾನು ಗುನ್ನಾ ಸ್ಥಳಕ್ಕೆ ಹೋಗಿರುತ್ತೇನೆ. ಗುನ್ನಾ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿರುತ್ತೇನೆ. ಗುನ್ನಾ ಸ್ಥಳದ ಉತ್ತರಕ್ಕೆ ಸಾಗರ ರಸ್ತೆ , ಪೂರ್ವ ಪಶ್ಚಿಮಕ್ಕೆ ಸರಕಾರಿ ಭೂಮಿ ಇದೆ. ದಾಖಲೆಗಳ ಪ್ರಕಾರ ಆರೋಪಿಗೂ ಜಪ್ತಾದ ವಾಹನಕ್ಕೂ ಸಂಬಂಧ ಇಲ್ಲಾ ಆದರೆ ವಾಹನ ಮಾರಾಟ ಆಗಿತ್ತು. ವಾಹನ ಮಾರಾಟ ಆದ ಬಗ್ಗೆ ಕ್ರಯ ಪತ್ರವನ್ನು ನೋಡಿಲ್ಲ. ಮುದ್ದೆಮಾಲುಗಳ ಮೇಲೆ ಲೇಬಲ್ ಇರಲಿಲ್ಲ. ಲೇಬಲುಗಳನ್ನು ಯಾರು ಕಿತ್ತಿರುತ್ತಾರೆಂದು ಪರಿಶೀಲನೆ ಮಾಡಿಲ್ಲಾ. ಸಾಮಾನ್ಯವಾಗಿ ಇಲಾಖೆಯಿಂದ ಬರುವ ಪ್ಯಾಕೇಟಿನ ಮೇಲೆ ಲೇಬಲುಗಳು ಇರುತ್ತವೆ. ಲೇಬಲ್ ಇಲ್ಲದಿದ್ದ ಕಾರಣ ತನಿಖೆ ಮಾಡುವುದು ಕಷ್ಟವಾಗಿತ್ತು. ಬ್ರಾಂಡ್ ಲೇಬಲ್ ಮೇಲೆ ಎಲ್ಲಿ ತಯಾರಾಗಿದೆ ಎಂಬ ಬಗ್ಗೆ ಮಾಹಿತಿ ಗೊತ್ತಾಗುತ್ತದೆ. ಪ್ಯಾಕೇಟಿನ ಮೇಲೆ ಅಂಟಿಸಿದ ಚೀಟಿ ಆದಾರದ ಮೇಲೆ ಯಾರು ಯಾರಿಗೆ ಮಾರಾಟ ಮಾಡಿದ್ದಾರೆಂದು ಗೊತ್ತಾಗುತ್ತದೆ. ಜಪ್ತು ಮಾಡಿದ ಎಲ್ಲಾ ಪ್ಯಾಕೇಟಿನ ಚೀಟಿಯನ್ನು ಕಿತ್ತಿರುತ್ತಾರೆ. ಮುದ್ದೆಮಾಲುಗಳ ಮೇಲೆ ಅಧಿಕೃತವಾದ ಲೇಬಲ್ ಇರಲಿಲ್ಲ. ಪ್ಯಾಕೇಟುಗಳ ವಿವರಗಳನ್ನು ಗೋಡೌನಿಗೆ ಕಳುಹಿಸಿದ್ದು ಇಲ್ಲಾ. ಎಫ್ ಎಸ್ ಎಲ್ ದಿಂದ ದಿಃ 15.05.2024 ಕ್ಕೆ ಮುದ್ದೆಮಾಲು ವಾಪಸ್ಸು ಬಂದಿದೆ. ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲಾ ಎಂದರೆ ಸರಿಯಲ್ಲ. ಚುನಾವಣೆ ಇದ್ದ ಕಾರಣ ಲೆಕ್ಕಾಚಾರ ತೋರಿಸಲು ಸುಳ್ಳು ಪ್ರಕರಣ ದಾಖಲಿಸಿ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಯಾವುದೋ ಲೇಬಲ್ ಗಳು ಇಲ್ಲದ ಮುದ್ದೆ ಮಾಲು ಉಪಯೊೀಗಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ಅಂಗಡಿ ಭಟ್ಕಳ ಶಹರದಲ್ಲಿ ಇದೆ ಆದರೆ ಈಗ ನೆನಪಿಲ್ಲ. ಆರೋಪಿಗೆ ಸಂಬಂಧಿಸಿದ ಯಾವುದೇ ಅಂಗಡಿ ಇಲ್ಲಾ ಎಂದರೆ ಸರಿಯಲ್ಲ. ಚಾಸಾ 1 ರವರು ದಾಖಲಿಸಿದ ಪ್ರಕರಣಕ್ಕೆ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಇಲಾಖೆಯ ಸಿಬ್ಬಂದಿಗಳನ್ನು ಬಳಸಿ ಸುಳ್ಳು ಪ್ರಕರಣ

ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ಯಾಕೇಟಿನ ವಿವರ ಗೊತ್ತಾಗುತ್ತದೆ ಎಂದು ತಿಳಿದು ನಾವೇ ಲೇಬಲನ್ನು ಕಿತ್ತಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ.,ಭಟ್ಕಳ.**